**ಸಾಕ್ಷಿಗೆ ದಿನಾಂಕ 28.10.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಕೆ.ವಿ.ಜಿ. ವಕೀಲರಿಂದ:**

1. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 1 ನೇ ಖಂಡಿಕೆಯಲ್ಲಿ ಹೇಳಿದಂತೆ ನಾನು ರೂ.80,000/- ಪ್ರತಿತಿಂಗಳು ಸಂಬಳ ಪಡೆಯುತ್ತಿದ್ದೇನೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಿಃ08.10.2023 ರಂದು ನನ್ನ ಹ್ಯೂಂಡೈ ಐ-10 ಕಾರ್ ಸಂಖ್ಯೆ ಕೆಎ-11-ಎಂ-3547 ಗೆ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಸದರಿ ದಾಖಲೆಯನ್ನು ಸಲ್ಲಿಸದೇ ಇದ್ದರೂ ಸಹ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತದ ದಿನ ನಾನು ಬೆಂಗಳೂರಿನಿಂದ ಮದ್ದೂರಿಗೆ ಮತ್ತು ಮದ್ದೂರಿನಿಂದ ಹನ್ನೂರಿಗೆ ಹೋಗುತ್ತಿದ್ದೆ. ಅಪಘಾತದ ರಸ್ತೆ ಸರ್ವೀಸ್ ರಸ್ತೆಯಾಗಿದ್ದು ನೇರ ರಸ್ತೆ ಎಂದರೆ ಸರಿ. ಸದರಿ ಅಪಘಾತದ ರಸ್ತೆ 50 ಅಡಿ ಅಗಲ ಇದೆ ಎಂದರೆ ಕದಂಬ ಹೋಟೇಲ್ ನ ನಂತರದಲ್ಲಿ ಬರುವ ತಿರುವು ರಸ್ತೆಯಲ್ಲಿ ಅಷ್ಟು ಅಗಲ ಇರುವುದಿಲ್ಲ. ಒಂದನೇ ಎದುರುದಾರರ ವಾಹನ ಮುಂದುಗಡೆ ಹೋಗುತ್ತಿದ್ದು, ಅದನ್ನು ಎಡಗಡೆ ಭಾಗದಿಂದ ಹಿಂದಿಕ್ಕಲು ಹೋಗಿ ನಾನೇ ಡಿಕ್ಕಿಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ಅಪಘಾತದ ನಂತರ ಕಾರನ್ನು ರಿಪೇರಿಗೆ ಮುಂಚೆ ಮಾಡಲಾದ ಸರ್ವೇ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಿಪಿ.3 ರಿಂದ 5 ನ್ನು ನೀಡಿದವರ ಸಾಕ್ಷ್ಯ ಮಾಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನಿಪಿ.3 ರಿಂದ 5 ರ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ನನ್ನ ಕಾರು ಇಲ್ಲದೇ ಇದ್ದುದರಿಂದ 15 ದಿನಗಳ ಕಾಲ ಬಾಡಿಗೆ ಕಾರನ್ನು ಪ್ರತಿದಿನ

ರೂ.1,000/- ದಂತೆ ಬಳಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಉಂಟಾಗಿದ್ದರೂ ಸಹ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**